## ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 91(852)
2. ಸದಸ್ಯರ ಹೆಸರು : ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)
3. ಉತ್ತರಿಸಬೇಕಾದ ದಿನಾಂಕ : 13.03.2025
4. ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಖಜಾನೆ-2 ಸಾಫ್ಟ್‌ವೇರ್ ಅಳವಡಿಕೆ ಮಾಡಿದ ಮೇಲೆ ಖಜಾನೆ ಇಲಾಖೆಯು ಉಚಿತವಾಗಿ ಸಾರ್ವಜನಿಕರು /ನೌಕರರಿಗೆ ಮತ್ತು ಇತರೆ ವ್ಯಕ್ತಿಗಳಿಗೆ ನೀಡಲಾದ ಮೊತ್ತವೆಷ್ಟು; (ವಿವರ ನೀಡುವುದು) | ಖಜಾನೆ-2 ತಂತ್ರಾಂಶದ ಮೂಲಕ ಖಜಾನೆ ಇಲಾಖೆಯು ಸಾರ್ವಜನಿಕರು/ ನೌಕರರಿಗೆ ಮತ್ತು ಇತರೆ ವ್ಯಕ್ತಿಗಳಿಗೆ ಯಾವುದೇ ಮೊತ್ತವನ್ನು ಉಚಿತವಾಗಿ ಪಾವತಿಸುತ್ತಿಲ್ಲ. |
| ಆ | ಅರ್ಹ ಫಲಾನುಭವಿಗಳಿಗೆ ಒಂದು ಬಾರಿಗೆ ಹಣ ಪಾವತಿಸುವ ಬದಲಿಗೆ ಎರಡು-ಮೂರು ಬಾರಿ ಹಣ ಪಾವತಿಸಿರುವ ಪ್ರಕರಣಗಳೆಷ್ಟು; (ವಿವರ ನೀಡುವುದು) | ವಿವಿಧ ಯೋಜನೆಗಳಡಿಯಲ್ಲಿ ಸಂಬಂಧಪಟ್ಟ ಇಲಾಖೆಗಳು ಆಯ್ಕೆಗೊಂಡ ಫಲಾನುಭವಿಗಳ ವಿವರಗಳನ್ನು ಅಗತ್ಯ ಪರಿಶೀಲನೆಯ ನಂತರ ಇ-ಆಡಳಿತ ಇಲಾಖೆಯ ಡಿಬಿಟಿ ಪೋರ್ಟಲ್ ಮೂಲಕ ಪಾವತಿಗಾಗಿ ಖಜಾನೆ-2 ಗೆ ಬಿಲ್ಲು ಸಲ್ಲಿಸುತ್ತಾರೆ. ಈ ರೀತಿ ಇಲಾಖಾ ಡಿಡಿಓ ಗಳು ಖಜಾನೆ-2 ರಲ್ಲಿ ಸೃಜಿಸಿ ಖಜಾನೆಗೆ ಸಲ್ಲಿಸಲಾದ ಬಿಲ್ಲುಗಳನ್ನು ಪರಿಶೀಲಿಸಿ ತೀರ್ಣಗೊಳಿಸಲಾಗುತ್ತಿರುತ್ತದೆ.<br><br>ಒಂದು ಯೋಜನೆಯ ಫಲಾನುಭವಿಗೆ ಒಂದೇ ಮಾಹೆಗೆ ಒಂದಕ್ಕಿಂತ ಹೆಚ್ಚು ಬಾರಿಗೆ ಪಾವತಿಯಾಗದಂತೆ ಖಜಾನೆ-2 ರಲ್ಲಿ 38 ರೀತಿಯ ವ್ಯಾಲಿಡೇಷನ್ ಇರುವುದರಿಂದ ಎರಡು-ಮೂರು ಬಾರಿ ಹಣ ಪಾವತಿಸಿರುವ ಪ್ರಕರಣಗಳು ಕಂಡು ಬಂದಿರುವುದಿಲ್ಲ. |

| | | |
|---|---|---|
| | | ಆದರೆ, ಸಾಮಾಜಿಕ ಭದ್ರತಾ ಪಿಂಚಣಿಗಳನ್ನು ನಾಡಕಛೇರಿಗಳಲ್ಲಿ ಮಂಜೂರು ಮಾಡುವ ಸಂದರ್ಭದಲ್ಲಿ ಒಂದಕ್ಕಿಂತ ಹೆಚ್ಚು ಫಲಾನುಭವಿಗಳಿಗೆ ಒಂದೇ ಬ್ಯಾಂಕ್ ಖಾತೆ ಸಂಖ್ಯೆಯನ್ನು ನಮೂದಿಸಲಾಗಿದ್ದ ಕಾರಣ ಒಂದೇ ಖಾತೆಗೆ ಹಲವು ಪಿಂಚಣಿದಾರರ ಪಿಂಚಣಿ ಖಜಾನೆ ಮುಖಾಂತರ ಜಮೆ ಆಗಿರುವುದನ್ನು ದಿನಾಂಕ 27/03/2019 ರಂದು. ನಡೆದ ಸಭೆಯಲ್ಲಿ ಗಮನಿಸಲಾಗಿದೆ. ಈ ರೀತಿ ವಿವಿಧ ಜಿಲ್ಲೆಗಳ ಒಟ್ಟು 7571 ಫಲಾನುಭವಿಗಳಿಗೆ ಪಾವತಿಯಾಗಿದ್ದ ಹೆಚ್ಚುವರಿ ಮೊತ್ತ ರೂ. 3,01,31,291/- ಗಳನ್ನು ವಸೂಲಿ ಮಾಡಿ ಸಂಚಿತ ನಿಧಿಗೆ ಜಮೆ ಮಾಡಲಾಗಿದೆ.<br><br>ಇದಲ್ಲದೆ, ಖಜಾನೆ-1 ರಿಂದ ಖಜಾನೆ-2 ಕ್ಕೆ ಪಿಂಚಣಿ ದಾಖಲೆಗಳ ವರ್ಗಾವಣಾ ಸಂದರ್ಭದಲ್ಲಿ ತುಮಕೂರು ಜಿಲ್ಲೆಗೆ ಸಂಬಂಧಿಸಿದ 44964 ಫಲಾನುಭವಿಗಳಿಗೆ ಅಕ್ಟೋಬರ 2018 ರಿಂದ ಡಿಸೆಂಬರ್ 2018 ರವರೆಗೆ ಖಜಾನೆ-1 ಮತ್ತು ಖಜಾನೆ - 2 ಎರಡೂ ಕಡೆ ಪಾವತಿಯಾಗಿದ್ದು, ಅಂತಹ ಹೆಚ್ಚುವರಿ ಪಾವತಿಗಳನ್ನು ಸದರಿ ಫಲಾನುಭವಿಗಳಿಗೆ ಮುಂದಿನ ಮೂರು ತಿಂಗಳುಗಳ ಪಿಂಚಣಿ ಪಾವತಿಯನ್ನು ಸ್ಥಗಿತಗೊಳಿಸುವ ಮೂಲಕ ಸಂಪೂರ್ಣವಾಗಿ ವಸೂಲಿ ಮಾಡಲಾಗಿರುತ್ತದೆ.<br><br>ಪ್ರಸ್ತುತ ಸಾಮಾಜಿಕ ಭದ್ರತಾ ಪಿಂಚಣಿಗಳನ್ನೂ ಸಹಾ ಖಜಾನೆ -2 DBT ಇಂಟಿಗ್ರೇಷನ್ ಮೂಲಕ ಪಾವತಿ ಮಾಡಲಾಗುತ್ತಿದ್ದು, 38 validation ಗೆ ಒಳಪಡುವುದರಿಂದ ಒಂದಕ್ಕಿಂತ ಹೆಚ್ಚುಬಾರಿ ಪಾವತಿಯಾಗುವುದಿಲ್ಲ. |

| | | |
|---|---|---|
| ಇ | ಅರ್ಹರಲ್ಲದ ಫಲಾನುಭವಿಗಳಿಗೆ ಹಣ ಪಾವತಿಸಲಾಗಿದೆಯೇ; (ವಿವರ ನೀಡುವುದು) | ಯಾವುದೇ ಯೋಜನೆಯ ಫಲಾನುಭವಿಗಳನ್ನು ನಿಗದಿತ ಮಾನದಂಡಗಳ ಪ್ರಕಾರ ಆಯ್ಕೆ ಮಾಡುವ ಹಾಗೂ ಮಂಜೂರಾತಿ ನೀಡುವ ಪ್ರಕ್ರಿಯೆ ಸಂಬಂಧಪಟ್ಟ ಇಲಾಖೆಯ ಹಂತದಲ್ಲಿಯೇ ನಡೆಯುತ್ತದೆ. ಈ ರೀತಿ ಆಯ್ಕೆಗೊಂಡ ಫಲಾನುಭವಿಗಳ ವಿವರಗಳನ್ನು ಅಗತ್ಯ ಪರಿಶೀಲನೆಯ ನಂತರ ಇ-ಆಡಳಿತ ಇಲಾಖೆಯ ಡಿಬಿಟಿ ಪೋರ್ಟಲ್ ಮೂಲಕ ಪಾವತಿಗಾಗಿ ಖಜಾನೆ-2 ಗೆ ರವಾನಿಸಲಾಗುತ್ತದೆ. ಆದ್ದರಿಂದ ಅರ್ಹರಲ್ಲದ ಫಲಾನುಭವಿಗಳಿಗೆ ಹಣ ಪಾವತಿಸುವ ಪ್ರಮೇಯ ಉದ್ಭವಿಸುವುದಿಲ್ಲ. |
| ಈ | ಇಂತಹ ಪ್ರಕರಣಗಳಲ್ಲಿ ವಸೂಲಾತಿ ಆಗದಿರುವ ಮೊತ್ತವೆಷ್ಟು; (ವಿವರ ನೀಡುವುದು) | ಉದ್ಭವಿಸುವುದಿಲ್ಲ |
| ಉ | ಆರ್ಥಿಕ ಇಲಾಖೆಯು ಆರ್ಥಿಕ ನಿಯಮಕ್ಕೆ ವಿರುದ್ಧವಾಗಿ ಉಪ-ವೋಚರ್‌ಗಳಿಲ್ಲದೆ ಯಾವ ಇಲಾಖೆಯ ಸಾಧಿಲ್ವಾರು ಬಿಲ್ಲುಗಳನ್ನು ಖಜಾನೆ ಇಲಾಖೆಯು ಪಾಸು ಮಾಡಲು ಸೂಚನೆ ನೀಡಿದೆ; ಹಾಗೂ ಎಷ್ಟು ಮೊತ್ತದ ಬಿಲ್ಲುಗಳನ್ನು ಪಾಸು ಮಾಡಿದೆ. (ವಿವರ ನೀಡುವುದು) | ಸಾದಿಲ್ವಾರು ವೆಚ್ಚ ಕೈಪಿಡಿ, 1958 ನಿಯಮ-38 ರ ಪ್ರಕಾರ ರೂ.1000 ಕ್ಕೂ ಮೇಲ್ಪಟ್ಟ ಉಪ ವೋಚರ್‌ಗಳನ್ನು ಹಣ ಸೆಳೆಯುವ ಮತ್ತು ಬಟವಾಡೆ ಅಧಿಕಾರಿಗಳು ಬಿಲ್ಲಿನ ಜೊತೆ ಕಡ್ಡಾಯವಾಗಿ ಖಜಾನೆಗೆ ಮತ್ತು ಮಹಾಲೇಖಪಾಲರಿಗೆ ಸಲ್ಲಿಸಬೇಕಾಗುತ್ತದೆ.<br><br>ಆರ್ಥಿಕ ಇಲಾಖೆಯು ಮೇಲ್ಕಂಡ ನಿಯಮಕ್ಕೆ ವಿರುದ್ಧವಾಗಿ ಉಪ ವೋಚರ್‌ಗಳಿಲ್ಲದೆ ಸಾದಿಲ್ವಾರು ಬಿಲ್ಲುಗಳನ್ನು ತೀರ್ಣಗೊಳಿಸಲು ಯಾವುದೇ ಸೂಚನೆ ನೀಡಿರುವುದಿಲ್ಲ. |

ಸಂಖ್ಯೆ: ಆಇ 122 ಆನಿ 2025

(ಸಿದ್ದರಾಮಯ್ಯ)

**ಮುಖ್ಯಮಂತ್ರಿ**